**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಎಸ್.ಸಿ 26/2020**

**ದಿನಾಂಕಃ 06.09.2021**

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)**

**ಪ್ರಾ.ಸಾಃ 2 (ಚಾ.ಸಾ.2 )**

| | | |
|---|---|---|
| **ಹೆಸರು** | **ಃ** | **ಫರಾನ್ ಮೆಹದಿ** |
| **ತಂದೆಯ ಹೆಸರು** | **ಃ** | **ಸೈಯದ್ ಲತೀಪ್** |
| **ವಯಸ್ಸು** | **ಃ** | **21 ವರ್ಷ** |
| **ಉದ್ಯೋಗ** | **ಃ** | **ವೆಲ್ಡಿಂಗ್ ಕೆಲಸ** |
| **ವಾಸ ಸ್ಥಳ** | **ಃ** | **ಚನ್ನಪಟ್ಟಣ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಸೈಯದ್ ಜಬೀರ್ ಹಾಗು ಪಿರ್ಯಾದಿ ಗೊತ್ತು. ನನಗೆ ಸಾಕ್ಷಿ ಸುಹೇಲಾ ಖಾನ್ ಹಾಗು ಮುಷಾ ಫೀರ್ ಗೊತ್ತು.

**2.** ತಾಃ **21.01.2020**ರಂದು ರಾತ್ರಿ **11** ಗಂಟೆ ಸಮಯದಲ್ಲಿ ನಾನು, ಸಿಮ್ರಾನ್ ಹಾಗು ಸುಹೇಲಾ ಖಾನ್ ಡಿಯೋ ದ್ವಿಚಕ್ರ ವಾಹನದಲ್ಲಿ ರಾಮನಗರದಿಂದ ಚನ್ನಪಟ್ಟಣದ ನಮ್ಮ ಮನೆಗೆ ಹೋಗುತ್ತಿದ್ದೆವು. ಸದರಿ ವಾಹನವನ್ನು ಸುಹೇಲಾ ಚಲಾಯಿಸುತ್ತಿದ್ದನು. ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ನಾವು ಹೋಗುತ್ತಿದ್ದಾಗ ಎದುರು ಭಾಗದಿಂದ ಆರೋಪಿ

ನಡೆದುಕೊಂಡು ಬರುತ್ತಿದ್ದವನು ನಮ್ಮ ಬೈಕನ್ನು ಅಡ್ಡ ಹಾಕಿ ತನ್ನ ಬ್ಯಾಗಿನಲ್ಲಿದ್ದ ಚಾಕುವನ್ನು ತೆಗೆದು ನನ್ನ ಎಡಗೈನ ಹೆಬ್ಬೆರಳಿಗೆ ಹೊಡೆದನು. ಇದರಿಂದ ನನ್ನ ಎಡಗೈನ ಹೆಬ್ಬೆರಳು ತುಂಡಾಗಿ ಕೆಳಗೆ ಬಿದ್ದಿತು. ಆರೋಪಿ ಚಾಕುವನ್ನು ತೆಗೆದುಕೊಂಡು ಸ್ಥಳದಿಂದ ಓಡಿ ಹೋದನು.

**3.** ನನ್ನೊಂದಿಗೆ ನನ್ನ ಸ್ನೇಹಿತರು ನನ್ನನ್ನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ನನ್ನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಘಟನೆಯಲ್ಲಿ ತುಂಡಾಗಿದ್ದ ನನ್ನ ಬೆರಳನ್ನು ಚನ್ನಪಟ್ಟಣ ಆಸ್ಪತ್ರೆಯಲ್ಲಿ ದ್ರಾವಣದಲ್ಲಿ ಹಾಕಿ ಕೊಟ್ಟಿದ್ದರು. ಅದನ್ನು ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅಲ್ಲಿ ಸದರಿ ಬೆರಳನ್ನು ನನ್ನ ಕೈಗೆ ಜೋಡಿಸಿ ಹೊಲೆದಿರುತ್ತಾರೆ.

**4.** ಸದರಿ ಘಟನೆಯ ಹಿಂದಿನ ದಿನ ಆರೋಪಿ ಮತ್ತು ಇತರರು ಗಾಂಜಾ ಹೊಡೆಯುತ್ತಿದ್ದಾಗ ನಾನು ಅವರಿಗೆ ಗಾಂಜಾ ಸೇವಿಸಬೇಡಿ, ಇಲ್ಲಿಂದ ಹೋಗಿ ಎಂದು ಹೇಳಿದಾಗ ಆರೋಪಿಯನ್ನು ಹೊರತು ಪಡಿಸಿ ಇತರರು ಅಲ್ಲಿಂದ ಹೊರಟು ಹೋಗಿದ್ದರು. ಆ ವಿಚಾರದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಆಗ ಗಲಾಟೆಯಾಗಿತ್ತು. ಅದೇ ಕಾರಣದಿಂದ ಆರೋಪಿ ಮರುದಿನ ನನ್ನ ಬೆರಳಿಗೆ ಚಾಕುವಿನಿಂದ ಹೊಡೆದಿರುತ್ತಾನೆ. ನನಗೆ ಆರೋಪಿ ಹೊಡೆಯಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸಲಾರೆ.

**5.** ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಅಲ್ಲಿ ಬಂದು ಘಟನೆಯ ಬಗ್ಗೆ ನನ್ನನ್ನು ಕೇಳಿ ತಿಳಿದುಕೊಂಡಿದ್ದರು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ</u>**

**6.** ನಾನು ಗಾಂಜಾ ಸೇವನೆ ಮಾಡುತ್ತೇನೆ ಅಂದರೆ ಸರಿಯಲ್ಲ. ನನ್ನ ಅಣ್ಣ - ಮುಸದ್ದೀರ್ ಮೊದಲು ಗಾಂಜಾ ಸೇವಿಸುತ್ತಿದ್ದ. ಈಗ ಆತ ಗಾಂಜಾ ಸೇವಿಸುವುದಿಲ್ಲ. ನನ್ನ ಅಣ್ಣ ಮುಸದ್ದೀರ್ ಗಾಂಜಾ ಸೇವಿಸುತ್ತಿದ್ದ ವಿಚಾರವನ್ನು ಆರೋಪಿ ನಮ್ಮ ಮನೆಯವರಿಗೆ ಹೇಳಿದ್ದರಿಂದ ನಮ್ಮ ಮನೆಯವರು ನನ್ನ ಅಣ್ಣನಿಗೆ ಬೈದು ಬುದ್ಧಿ ಹೇಳಿದ್ದರಿಂದ ನನಗೂ, ನನ್ನ ಅಣ್ಣನಿಗೂ ಆರೋಪಿಯ ಮೇಲೆ ಕೋಪ ಇತ್ತು ಅಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ಈಗಲೂ ಗಾಂಜಾ ಸೇವಿಸುತ್ತೇವೆ ಅಂದರೆ ಸರಿಯಲ್ಲ.

**7.** ಈ ಪ್ರಕರಣದ ಘಟನೆ ನಡೆಯುತ್ತೆಂದು ಹೇಳಲಾದ ಸ್ಥಳದ ಅಕ್ಕ ಪಕ್ಕ ಮನೆಗಳಿವೆ ಅಂದರೆ ಸರಿ. ಸದರಿ ಸ್ಥಳದಲ್ಲಿ ಬೀಡಿ, ಸಿಗರೇಟ್ ಹಾಗು ಟೀ ಅಂಗಡಿಗಳು ಇವೆ ಅಂದರೆ ಸಾಕ್ಷಿ ಸುಮಾರು **50** ಅಡಿ ದೂರದಲ್ಲಿ ಟೀ ಅಂಗಡಿಗಳಿವೆ ಎಂದು ನುಡಿದಿದ್ದಾರೆ. ಸದರಿ ಟೀ ಅಂಗಡಿಗಳಲ್ಲಿ ಬೀಡಿ, ಸಿಗರೇಟ್ ಸಹ ಮಾರಾಟ ಮಾಡುತ್ತಾರೆ ಅಂದರೆ ಸರಿ. ರಾತ್ರಿ ಹೊತ್ತಿನಲ್ಲೂ ಸಹ ಸದರಿ ಟೀ, ಬೀಡಿ, ಸಿಗರೇಟ್ ಅಂಗಡಿಗಳು ತೆರೆದಿರುತ್ತವೆ ಅಂದರೆ ಸಾಕ್ಷಿ ಆ ದಿನ ತೆರೆದಿರಲಿಲ್ಲ ಎಂದು ನುಡಿದಿದ್ದಾರೆ. ಪ್ರತಿ ದಿನ ಸದರಿ ಅಂಗಡಿಗಳು ತೆರೆದಿರುತ್ತವೆ ಅಂದರೆ ಸರಿ.

**8.** ವೆಲ್ಡಿಂಗ್ ಕೆಲಸ ಮಾಡುವಾಗ ಆಕಸ್ಮಿಕವಾಗಿ ಯಂತ್ರಕ್ಕೆ ಬೆರಳು ಅಡ್ಡ ಬಂದರೆ, ಬೆರಳು ಕತ್ತರಿಸಿ ಹೋಗುತ್ತದೆ ಅಂದರೆ ಸರಿ. ನಾನು ವೆಲ್ಡಿಂಗ್ ಕೆಲಸ ಮಾಡುವಾಗ ನನ್ನ ಬೆರಳು ಆಕಸ್ಮಿಕವಾಗಿ ಕತ್ತರಿಸಿ ಹೋಗಿರುತ್ತದೆ ಅಂದರೆ ಸರಿಯಲ್ಲ.

**9.** ಘಟನೆ ನಡೆದ ಸಮಯದಲ್ಲಿ ನಾನು ಟೀ ಶರ್ಟ್ ಧರಿಸಿದ್ದೆ. ಘಟನೆ ನಡೆದ ನಂತರ ನನ್ನ ಪ್ಯಾಂಟಿಗೆ ರಕ್ತವಾಗಿತ್ತು. ಘಟನೆಯ ಹಿಂದಿನ ದಿನ ನನ್ನ ಮತ್ತು ಆರೋಪಿಯ ನಡುವೆ ಗಾಂಜಾ ಸೇವನೆಯ ಬಗ್ಗೆ ಆದ ಗಲಾಟೆಯ ವಿಚಾರವನ್ನು ನಾನು ಪೊಲೀಸರ ಅಥವಾ ವೈದರ ಮುಂದೆ ಹೇಳಿರುವುದಿಲ್ಲ ಅಂದರೆ ಸರಿ.

**10.** ಘಟನೆಯ ಬಗ್ಗೆ ಪೊಲೀಸರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನ್ನ ವಿಚಾರಿಸಿದ್ದು, ಅದಕ್ಕೂ ಮೊದಲು ಚನ್ನಪಟ್ಟಣ ಆಸ್ಪತ್ರೆಯಲ್ಲಿ ಕೇಳಿದ್ದರು. ಚನ್ನಪಟ್ಟಣ ಆಸ್ಪತ್ರೆಯಲ್ಲಿ ಪೊಲೀಸರು ಘಟನೆಯ ವಿಚಾರವನ್ನು ಬರೆದುಕೊಂಡಿರುವುದಿಲ್ಲ. ಘಟನೆಯಾದ **3** ದಿನಗಳಿಗೆ ಪೊಲೀಸರು ವಿಕ್ಟೋರಿಯಾ ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದುಕೊಂಡರು.

**11.** ಅಪರೇಶನ್ ಆದ **2 – 3** ದಿನಗಳ ಕಾಲ ನನಗೆ ನೋವು ಕಡಿಮೆಯಾಗಲು ಕೊಟ್ಟ ಚುಚ್ಚುಮದ್ದಿನಿಂದ ನನಗೆ ಸರಿಯಾಗಿ ಪ್ರಜ್ಞೆ ಇರಲಿಲ್ಲ ಅಂದರೆ ಸಾಕ್ಷಿ ಅಪರೇಶನ್ ಆದ ದಿನ ಸಂಜೆ **4** ಗಂಟೆ ಹೊತ್ತಿಗೆ ನನಗೆ ಪ್ರಜ್ಞೆ ಸರಿಯಾಗಿ ಬಂದಿತ್ತು ಎಂದು ನುಡಿದಿದ್ದಾರೆ.

**12.** ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನ್ನ ಹೇಳಿಕೆಯನ್ನು ಪೊಲೀಸರು ಪಡೆದುಕೊಂಡಾಗ ನಾನು ಮತ್ತು ಇಬ್ಬರು ಪೊಲೀಸರು ಮಾತ್ರ ಇದ್ದೇವು. ಪೊಲೀಸರು ಕೇಳಿದ್ದಕ್ಕೆ ನಾನು ತಲೆ ಅಲ್ಲಾಡಿಸುತ್ತಿದ್ದೆ.

**13.** ಆರೋಪಿ ನನ್ನ ಮೇಲೆ ಯಾವುದೇ ಚಾಕುವಿನಿಂದ ಹಲ್ಲೆ ಮಾಡಿಲ್ಲವಾದರೂ ಸಹ ನಾನು ದ್ವೇಷದಿಂದ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**14.** ನನ್ನ ಅಣ್ಣ ಗಾಂಜಾ ಸೇವಿಸುತ್ತಿದ್ದ ವಿಚಾರವನ್ನು ಆರೋಪಿ ನಮ್ಮ ಮನೆಯವರಿಗೆ ಹೇಳಿದ್ದರಿಂದ ನಮ್ಮ ಮನೆಯವರು ನನ್ನ ಅಣ್ಣನಿಗೆ ಬೈದರೆಂಬ ದ್ವೇಷದಿಂದ ನಾನು ಮತ್ತು ನನ್ನ ಅಣ್ಣ ಸೇರಿಕೊಂಡು ಆರೋಪಿಯ ವಿರುದ್ಧ ಸುಳ್ಳು ಆರೋಪ ಹೊರೆಸಿದ್ದೇವೆ ಅಂದರೆ ಸರಿಯಲ್ಲ. ನಾನು ವೆಲ್ಡಿಂಗ್ ಕೆಲಸ ಮಾಡುವಾಗ ಆಕಸ್ಮಿಕವಾಗಿ ನನ್ನ ಎಡಗೈನ ಹೆಬ್ಬೆರಳು ಯಂತ್ರಕ್ಕೆ ಸಿಕ್ಕಿ ಕತ್ತರಿಸಲ್ಪಟ್ಟ ಸಂದರ್ಭವನ್ನು ಉಪಯೋಗಿಸಿಕೊಂಡು ಈ ಸುಳ್ಳು ಆರೋಪ ಹೊರೆಸಲಾಗಿದೆ ಅಂದರೆ ಸರಿಯಲ್ಲ. ನನ್ನನ್ನು ಚನ್ನಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ ಹಾಗು ಅಲ್ಲಿ ಯಾವುದೇ ರೀತಿಯ ಚಿಕಿತ್ಸೆ ನೀಡಿಲ್ಲ ಅಂದರೆ ಸರಿಯಲ್ಲ. ಬೆಂಗಳೂರು ಆಸ್ಪತ್ರೆಗೆ ಹೋಗಿ ಎಂದು ಚನ್ನಪಟ್ಟಣ ಆಸ್ಪತ್ರೆಯವರು ನಮಗೆ ಹೇಳಿರಲಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕಃ 14.12.2021**

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**

**19.** ಪೊಲೀಸರ ಮುಂದೆ ಆರೋಪಿ ನನಗೆ ಚಾಕುವಿನಿಂದ ಹಲ್ಲೆ ಮಾಡಿದ ಹೇಳಿಲ್ಲ ಅಂದರೆ ಸರಿ. ನಾನು ಕೆಲಸ ಮಾಡುವ ಸ್ಥಳದಲ್ಲಿ ಕೆಲಸದ ಒತ್ತಡದ ಇದ್ದಾಗ ರಾತ್ರಿ **1** ಗಂಟೆಯವರೆಗು ಕೆಲಸ ಮಾಡುತ್ತೇವೆ ಅಂದರೆ ಸರಿ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕಃ 13.12.2023.**

**(ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**

**20.** **4** ವರ್ಷಗಳ ಹಿಂದೆ ಚನ್ನಪಟ್ಟಣದ ಸುರೇಶ್ ಎಂಬುವವರ ವೆಲ್ಡಿಂಗ್ ಶಾಪ್ ನಲ್ಲಿ ಕಬ್ಬಿಣ ಕತ್ತರಿಸುವ ಮತ್ತು ವೆಲ್ಡಿಂಗ್ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಮಧ್ಯ ರಾತ್ರಿಯವರೆಗೂ ನಿರಂತರವಾಗಿ ಕೆಲಸ ಮಾಡುತ್ತಿರುವಾಗ ನಿದ್ದೆ ಹೊತ್ತಿನಲ್ಲಿ ಆಕಸ್ಮಿಕವಾಗಿ ಕೈಬೆರಳು ಕತ್ತರಿಸುವುದು, ಗಾಯ ಆಗುವುದು ಆಗುತ್ತಿರುತ್ತವೆ ಎಂದರೆ ಸರಿ.

**21.** ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿ. ನಾನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದಾಗ ವೈದ್ಯರು ಹೇಗೆ ಆಯಿತು ಎಂದು ಕೇಳಿದಾಗ ಮಿಷನ್ ನಲ್ಲಿ, ಕೆಲಸ ಮಾಡುವಾಗ ಎಡಗೈ ಹೆಬ್ಬೆರಳು ಕಟ್ಟಾಯಿತು ಎಂದು ಹೇಳಿದ್ದೇನೆ ಎಂದರೆ ಸರಿ. ಆಗ ಪೊಲೀಸರು ಇದ್ದರು ಅವರಿಗೂ ಕೂಡ ಅದೇ ರೀತಿ ಹೇಳಿದ್ದೇನೆ ಎಂದರೆ ಸರಿ.

**22.** ಮುಖ್ಯ ವಿಚಾರಣೆಗೆ ಬರುವ ಮೊದಲು ಪೊಲೀಸರು ಕರೆಯಿಸಿ ಕೇಸು ಹಾಕಿದ ರೀತಿಯಲ್ಲಿಯೇ ಸಾಕ್ಷಿ ಹೇಳಬೇಕು ಎಂದು ಹೇಳಿದ್ದರೂ ಎಂದರೆ ಸರಿ. ಅದಕ್ಕೂ ಮುಂಚೆ ಏನು ಕೇಸು ಆಗಿದೆ, ಏನು ಸಾಕ್ಷಿ ಹೇಳಬೇಕು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಇದು ಆಕಸ್ಮಿಕವಾಗಿ ಆದ ಘಟನೆ ಆಗಿರುವುದರಿಂದ ಕೇಸು ಮಾಡಲು ಬರುವುದಿಲ್ಲ ಎಂದು ಪೊಲೀಸರು ಹೊರಟು ಹೋದರು ಎಂದರೆ ಸರಿ.

**23.** ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನನ್ನ ಅಣ್ಣ ಮುಸಾದಿರ್ ಗಾಂಜಾ ಸೇದುತ್ತಿದ್ದ ಆ ವಿಚಾರವನ್ನು ಆರೋಪಿ ನನ್ನ ತಂದೆ-ತಾಯಿಗಳಿಗೆ ಹೇಳಿದ್ದರಿಂದ ನನ್ನ ತಂದೆ-ತಾಯಿಗಳು ಮುಸಾದಿರ್ ನನ್ನು ಹೊಡೆದು ಮನೆಯಿಂದ ಹೊರಗೆ ಹಾಕಿದ ವಿಚಾರದಲ್ಲಿ ನಮ್ಮ ಅಣ್ಣನಿಗೆ ಆರೋಪಿಯ ವಿರುದ್ಧ ದ್ವೇಷ ಇತ್ತು, ಆ ಕಾರಣ ನನ್ನ ಅಣ್ಣ ಈ ಕೇಸು ಮಾಡುವುದಕ್ಕೆ ಓಡಾಡುತ್ತಿದ್ದ ಎಂದರೆ ಸರಿ. ಆಸ್ಪತ್ರೆಯಲ್ಲಿ ನಾನು ನಿಪಿ 5 ಕ್ಕೆ ಸಹಿ ಮಾಡಿದ ವೇಳೆಯಲ್ಲಿ ನನ್ನ ಅಣ್ಣ ಪೊಲೀಸರ ಜೊತೆ ಇದ್ದ ಎಂದರೆ ಸರಿ. ನನ್ನ ಅಣ್ಣ ಸಹಿ ಮಾಡು ಎಂದು ಹೇಳಿದ್ದರಿಂದ, ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ.

**24.** ನಾನು ಮುಖ್ಯ ವಿಚಾರಣೆಗೆ ಸಾಕ್ಷಿ ಹೇಳಲು ಬಂದಾಗ ನನ್ನ ಅಣ್ಣ ಮುಸಾದಿರ್ ಕೂಡ ಬಂದಿದ್ದ ಎಂದರೆ ಸರಿ.

**ಮಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

**24.** ನನ್ನ ಅಣ್ಣ ಮುಸಾದಿರ್ ಎ.ಸಿ. ರಿಪೇರಿ ಕೆಲಸ ಮಾಡುತ್ತಾನೆ. ಸುರೇಶ್ ರವರ ವೆಲ್ಡಿಂಗ್ ಅಂಗಡಿಯಲ್ಲಿ ಕೆಲಸ ಮಾಡುವಾಗ ಕೈಗೆ ಗಾಯವಾಯಿತು ಎಂದು ಪೊಲೀಸರ ಮುಂದೆ ದೂರು ಕೊಟ್ಟಿದ್ದೀಯಾ ಎಂದರೆ ಇಲ್ಲ. ಲೇಬರ್ ಆಫೀಸ್ ಗೆ ಹೋಗಿ

ದೂರು ಕೊಟ್ಟಿದ್ದೀಯಾ ಎಂದರೆ ಇಲ್ಲ. ಕೈ ಗಾಯ ಆದ ಬಗ್ಗೆ ಸುರೇಶ್ ರವರ ಕಡೆಯಿಂದ ಪರಿಹಾರ ಪಡೆದುಕೊಂಡಿದ್ದೀಯಾ ಎಂದೆ ಇಲ್ಲ.

**25.** ಸುಮಾರು **4** ವರ್ಷಗಳ ಹಿಂದೆ ನನ್ನ ಅಣ್ಣನಿಗೆ ಗಾಂಜಾ ಸೇದುವ ವಿಷಯಲ್ಲಿ ಮನೆಯಿಂದ ಹೊರಗೆ ಹಾಕಿದ್ದಾರೆ. ಸುಮಾರು **3** ತಿಂಗಳಿಂದ ಆತ ನಮ್ಮ ಮನೆಯಲ್ಲಿ ಇರುತ್ತಾನೆ. ಆರೋಪಿಗೂ ಮತ್ತು ನನ್ನ ಅಣ್ಣನ ಮಧ್ಯೆ ದ್ವೇಷ ಇತ್ತು ಎಂದರೆ ಸರಿ. ನನ್ನ ಅಣ್ಣ ಓಡಾಡಿ ಈ ಕೇಸು ಮಾಡಿಸಿದ್ದಾನೆ ಎಂದು ಹೇಳಿದ್ದೀಯಾ ಸರಿಯಾ ಅಂದರೆ ಸರಿ. ಈ ಕೇಸು ಮಾಡಿರುವುದು ಸುಳ್ಳು ಎಂದು ಮುಖ್ಯ ವಿಚಾರಣೆ ಮಾಡಿಸುವಾಗ ಗೊತ್ತಿತ್ತಾ ಎಂದರೆ ಇಲ್ಲ.

**26.** ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಹೇಳುವಾಗ ಘಟನೆಯ ಅನುಸಾರವಾಗಿ ಸಾಕ್ಷಿ ಹೇಳಿದ್ದೇನೆ ಎಂದರೆ ಪೊಲೀಸರು ಏನು ಹೇಳಿದ್ದರೋ ನಾನು ಆ ಪ್ರಕಾರ ಸಾಕ್ಷಿ ಹೇಳಿದ್ದೇನೆ.

**ಈ ಹಂತದಲ್ಲಿ ನ್ಯಾಯಾಲಯ ಕಲಾಪದ ಅವಧಿ ಮುಗಿದಿದ್ದರಿಂದ ವಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿ:16.07.2024.**

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ವಾಟಿ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

27. ದಿ:06.09.2021 ರಂದು ನಾನು ಕೋರ್ಟಿನ ಮುಂದೆ ಬಂದು ಸಾಕ್ಷಿ ಹೇಳಿ ಹೋಗಿದ್ದೇನು ಎಂದರೆ ಸರಿ. ಆ ದಿವಸ ನಾನು ಪೊಲೀಸರು ಹೇಳಿಕೊಟ್ಟಂತೆ ಸಾಕ್ಷಿ ಹೇಳಿದ್ದೆನು. ಆ ದಿವಸ ನಾನು ಹೇಳಿದ ಸಾಕ್ಷಿ ಸರಿಯಿಲ್ಲ, ಈಗ ಹೇಳಿರುವ ಸಾಕ್ಷಿ ಸರಿ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಾಗ ಆರೋಪಿಯ ವಿರುದ್ಧ ಯಾಕೆ ಹೇಳಿಕೆಯನ್ನು ಕೊಟ್ಟಿದ್ದೀರಾ ಎನ್ನುವುದಕ್ಕೆ ಸಾಕ್ಷಿಯು ನಾನು ಹೇಳಿಕೆ ಕೊಟ್ಟಿಲ್ಲ ಎಂದು ಉತ್ತರಿಸಿದ್ದಾರೆ. ನಾನು ಇಲ್ಲಿ ಬಂದು ಪ್ರಮಾಣ ಮಾಡಿ ಸಾಕ್ಷಿ ಹೇಳುವಾಗ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ನನಗೆ ಗೊತ್ತಿರಲಿಲ್ಲ. ನನಗೆ ಏನು ಸರಿ, ಏನು ತಪ್ಪು ಗೊತ್ತಾಗುತ್ತದೆ ಎಂದರೆ ಸರಿ. ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ರಾಜಿ ಮಾಡಿಕೊಂಡು ಇಲ್ಲಿ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

28. ಆರೋಪಿ ನನಗೆ ಹೊಡೆದಿದ್ದರಿಂದ ನನ್ನ ಎಡಗೈನ ಹೆಬ್ಬೆಟ್ಟು ಕಟ್ ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ತಮ್ಮ ಎಡಗೈನ ಹೆಬ್ಬೆಟ್ಟನ್ನು ತೋರಿಸಿದ್ದು ಅದು ಕಟ್ ಆಗಿ ಜೋಡಿಸಿರುವ ಹಾಗೆ ಕಾಣಿಸುತ್ತಿದೆ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**